ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಗೌರವ ಧನ ನೀಡಿರುವುದು

೧೩೫೧ ಶ್ರೀ ಎನ್. ಟಿ. ಬೊಮ್ಮಣ್ಣ (ಕೂಡ್ಲಿಗಿ). — ಮಾನ್ಯ ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿವಿಧ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ೧೯೮೭-೮೮ನೇ ಸಾಲಿನಲ್ಲಿ ಎಷ್ಟು ಜನರಿಗೆ ಗೌರವಧನ ನೀಡಿದೆ ?

ಆ) ಗೌರವ ಧನವನ್ನು ಪಡೆಯುತ್ತಿರುವವರಲ್ಲಿ ಕೆಲವರು ನಿವೃತ್ತಿ ವೇತನವನ್ನು ಪಡೆಯುತ್ತಿರುವುದು ಮತ್ತು ಬಾಡಿಗೆಯನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಗೌರವ ಧನ ನೀಡುವಲ್ಲಿ ಸರ್ಕಾರವು ವ್ಯಕ್ತಿಯ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬಿಡಿಎ ಸಚಿವರು)

ಅ) ಇಲ್ಲ.

ಆ) ನಿವೃತ್ತಿ ವೇತನ ಪಡೆಯುತ್ತಿರುವುದು ಗಮನಕ್ಕೆ ಬಂದಿದೆ. ಬಾಡಿಗೆ ಪಡೆಯುತ್ತಿರುವುದು ಗಮನಕ್ಕೆ ಬಂದಿರುವುದಿಲ್ಲ.

ಇ) ಹೌದು.

ಮೊಳಗಾಂ ಭೋಪಾಲ್‌ಗಢ್ ರಸ್ತೆ

೧೬೬೫. ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್).— ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ಜಕ್ಕ್ ಹಾಗೂ ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಔರಾದ ತಾಲ್ಲೂಕಿನಲ್ಲಿರುವ ಮೊಳಿಗಾಂ ಗ್ರಾಮದಿಂದ ಭೋಪಾಳಗಡ ಗ್ರಾಮದವರೆಗೆ ರಸ್ತೆಯ ಕಾವಂಗಾರಿಗಾಗಿ ತಗುಲಿದ ವೆಚ್ಚವೆಷ್ಟು ?

ಆ) ಆ ರಸ್ತೆಯಲ್ಲಿ ಬೇನಾಮಿಯಾಗಿ ಹಣ ವೆಚ್ಚ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಕೈಗೊಂಡ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಮೊಳಗಾಂ ಗ್ರಾಮದಿಂದ ಭೂಪಾಳಗಡ ಗ್ರಾಮದವರೆಗಿನ ರಸ್ತೆಯನ್ನು ಎನ್.ಆರ್.ಇ.ಪಿ. (ಅಭಾವ) ಕಾರ್ಯಕ್ರಮದಲ್ಲಿ ೧೯೮೬-೮೭ನೇ ಸಾಲಿನಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಸಂತಪೂರ ತೆಗೆದುಕೊಂಡಿದ್ದಾರೆ. ಈ ಕೆಲಸಕ್ಕೆ ಇಲ್ಲಿಯವರೆಗೆ ಳಟಿ.೨೩೩-೦೦ ರೂ. ಖರ್ಚು ಮಾಡಲಾಗಿದೆ.

ಆ) ರಸ್ತೆಯಲ್ಲಿ ಬೇನಾಮಿಯಾಗಿ ಹಣ ವೆಚ್ಚ ಮಾಡಿರುವುದು ಕಾರ್ಯನಿರ್ವಾಹಕ ಇಂಜಿನಿಯರ್, ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ, ಬೀದರ್ ಅವರ ಗಮನಕ್ಕೆ ಬಂದಿಲ್ಲವೆಂದು ತಿಳಿಸಿದ್ದಾರೆ.

ಇ) ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನವರನ್ನು ಇದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದು ಕೊಳ್ಳುವಂತೆ ತಿಳಿಸಲಾಗುವುದು.